# ಕಾಲೇಜಿನೊಂದಿಗೆ ಸಂಬಂಧ ಏರ್ಪಡಿಸಿಕೊಂಡಿದ್ದು

## ಒಂದು ನೈಜ ಪ್ರಯತ್ನ

ಎಲ್.ಎನ್. ಆರ್. ಪದವಿ ಕಾಲೇಜು




**21 ಮೇ 2022**

ರಾಮೋಹಳ್ಳಿ ಚಿಕ್ಕ ಊರು. ಇದು ಬೆಂಗಳೂರು ಮೈಸೂರು ರಸ್ತೆಯಲ್ಲಿ ಇರುವ ಸುಪ್ರಸಿದ್ಧ 'ದೊಡ್ಡ ಆಲದಮರ' ಬಳಿ ಇದೆ. ನಗರದ ಭಾಗವೇ ಆಗುತ್ತಿದೆ ಎನಿಸಿದರೂ, ಗ್ರಾಮದ ಕುರುಹುಗಳು ಅಲ್ಲಿ ಹಲವಾರು ಕಾಣುತ್ತವೆ. ಇಂಥಲ್ಲಿ ಅನೇಕ ಶಾಲೆ, ಕಾಲೇಜುಗಳೂ ಇರುವುದು ಸಂತೋಷದ ವಿಷಯ.

ಗ್ರಾಮೀಣ ಪ್ರದೇಶದ ಶಾಲೆ, ಕಾಲೇಜುಗಳಿಗೆ ಹೋಗಿ ಸಮಾಜವಾದಿ ವೇದಿಕೆಯನ್ನು ಮತ್ತು ಕೆಲವು ಒಳ್ಳೆಯ ಕಿರುಪುಸ್ತಕಗಳನ್ನು ಪರಿಚಯಿಸುವ ಪ್ರಯತ್ನದ ಮುಂದುವರಿಕೆಯಾಗಿ, ರಾಮೋಹಳ್ಳಿಯಲ್ಲಿನ ಎಲ್.ಎನ್. ಆರ್. ಶಾಲೆ/ಕಾಲೇಜಿಗೆ ಭೇಟಿ ನೀಡುವ ಯೋಜನೆಯನ್ನು ಮೇ ತಿಂಗಳ ಮೂರನೇ ವಾರದಲ್ಲಿ ರೂಪಿಸಲಾಗಿತ್ತು.

ಕರ್ನಾಟಕ ಸಮಾಜವಾದಿ ವೇದಿಕೆ ಪರವಾಗಿ ಕೆಲವು ಪುಸ್ತಕಗಳ ಸಹಿತ ಕೆಂಗೇರಿ ಹೋಬಳಿಯಲ್ಲಿ ಇರುವ ಈ ಶಾಲೆ/ ಕಾಲೇಜಿಗೆ ಭೇಟಿ ನೀಡಲಾಯಿತು. ಹಿಂದಿನ ದಿನವೇ ಗೂಗಲ್‌ನಲ್ಲಿ ಕಾಲೇಜಿನ ಮಾಹಿತಿ ಪಡೆದು ಕೊಂಡು, ಪ್ರಿನ್ಸಿಪಾಲರಿಗೆ ಫೋನ್ ಮಾಡಿ, ಭೇಟಿ ನಿಗದಿಪಡಿಸಲಾಗಿತ್ತು.

ಮನೆಯಿಂದ ಬಸ್‌ಸ್ಟಾಪ್‌ಗೆ 1 ಕಿ.ಮೀ. ನಡೆದುಕೊಂಡು ಹೋಗಿ, ಅಲ್ಲಿ ಒಂದು ಬಸ್ ಹಿಡಿದು, ಒಂದು ಕಡೆ ಬಸ್ ಇಳಿದು, ಅರ್ಧ ಕಿ.ಮೀ. ನಡೆದು, ಇನ್ನೊಂದು ಬಸ್‌ಸ್ಟಾಪ್ ತಲುಪಿ, ಅಲ್ಲಿ ಅರ್ಧ ಗಂಟೆ ಕಾದು, ಮತ್ತೊಂದು ಬಸ್ ಮೂಲಕ ರಾಮೋಹಳ್ಳಿ ತಲುಪಿ, ಅಲ್ಲಿನ ಬಸ್‌ಸ್ಟಾಪ್‌ನಿಂದ 1 ಕಿ.ಮೀ ಮತ್ತೆ ನಡೆದಾಗು ಸಿಗುವುದೇ ಎಲ್.ಎನ್.ಆರ್. ಕಾಲೇಜು. ಕಡೇ 1 ಕಿ.ಮೀ. ನಡೆದುಕೊಂಡು ಹೋಗುತ್ತಿದ್ದಾಗ, ಅದೇ ದಾರಿಯಲ್ಲಿ ಬಂದ ಬೈಕ್ ಸವಾರರಿಗೆ ಕೈ ಚಾಚಿ ನಿಲ್ಲಿಸಲು ತಿಳಿಸಿ, ಅವರಿಂದ ಲಿಫ್ಟ್ ಪಡೆದು ಕಾಲೇಜು ತಲುಪಿದಾಗ ನನ್ನ ಪ್ರಯಾಣ ಮುಗಿದಿತ್ತು. ನಾನು ಕಾಲೇಜಿನ ಮೇನ್ ಗೇಟ್ ಬಳಿ ಬಂದಿದ್ದೆ.

ಕಾಲೇಜಿಗೆ ಭೇಟಿ ನೀಡಿದಾಗ, ಮೊದಲು ಎಚ್.ಎನ್. ಸವಿತಾ (ಇತಿಹಾಸ ಉಪನ್ಯಾಸಕರು) ಸ್ವಾಗತಿಸಿದರು. 'ಪ್ರಿನ್ಸಿಪಾಲರು ಇಷ್ಟರಲ್ಲೇ ಬರುತ್ತಾರೆ, ದಯವಿಟ್ಟು ಇಲ್ಲೇ ಕುಳಿತಿರಿ' ಎಂದು ಉಪನ್ಯಾಸಕರ ಕೊಠಡಿಯಲ್ಲಿ ಕುಳಿತು ಕೊಂಡಿರಲು ತಿಳಿಸಿದರು. ನೀರು–ಚಹಾ ತರಿಸಿ ಕೊಟ್ಟರು.

ಅವರೊಂದಿಗೆ ಮಾತನಾಡಲಾಗಿ, ಪಿಯು ಕಾಲೇಜಿನಲ್ಲಿ 150 ಮಕ್ಕಳು ಮತ್ತು ಡಿಗ್ರಿ ಕಾಲೇಜಿನಲ್ಲಿ 130 ಮಕ್ಕಳು ಇರುವುದು ತಿಳಿಯಿತು. ಒಟ್ಟು 13 ಜನರು ಉಪನ್ಯಾಸಕರು ಇರುವುದಾಗಿ ತಿಳಿಸಿದರು.

ಸಮಾಜವಾದಿ ವೇದಿಕೆ ಪರವಾಗಿ ಅವರಿಗೆ 'ನಮ್ಮ ಸಂವಿಧಾನ (ಅತಿ ಸಂಕ್ಷಿಪ್ತದಲ್ಲಿ)', 'ಬುದ್ಧನ ದೃಷ್ಟಿಯಲ್ಲಿ ಧಮ್ಮ ಎಂದರೆ ಏನು?' ಮತ್ತು 'ವಚನಯುಗದ ಹರಿಕಾರ ಬಸವಣ್ಣ ನಮಗೆ ಮಾರ್ಗದರ್ಶಿ ಹೇಗೆ?' ಎಂಬ ಮೂರು ಪುಸ್ತಕಗಳ ಒಂದೊಂದು ಪ್ರತಿಯನ್ನು ನೀಡಲಾಗಿ, ಅದಕ್ಕೆ ಅವರು ರೂ.60/- ಪಾವತಿಸಿದರು. ಉಳಿದ ಪುಸ್ತಕಗಳನ್ನು ಪ್ರಿನ್ಸಿಪಾಲರ ಬಳಿ ಕೊಡುವಂತೆ ತಿಳಿಸಿದರು.

ಹತ್ತಿಪ್ಪತ್ತು ನಿಮಿಷಗಳಲ್ಲಿ ಪ್ರಿನ್ಸಿಪಾಲ್ ರಮೇಶ್ ಪಿ.ಟಿ. ಬಂದರು. ತಡವಾಗಿ ಬಂದಿದ್ದಕ್ಕೆ ಕ್ಷಮೆ ಕೋರಿದರು. ತಮ್ಮ ಚೇಂಬರಿಗೆ ಕರೆದೊಯ್ದು, ಬಂದ ವಿಷಯವನ್ನು ತಿಳಿಸಿ ಎಂದು ಕೇಳಿದರು.

ಹಿಂದಿನ ದಿನ ಫೋನ್‌ನಲ್ಲಿ ಸಂಕ್ಷಿಪ್ತವಾಗಿ ತಿಳಿಸಿದ್ದನ್ನು ಈಗ ಅವರಿಗೆ ವಿವರವಾಗಿ ತಿಳಿಸಲಾಯಿತು. ಸಮಾಜವಾದಿ ವೇದಿಕೆ ಉದ್ದೇಶ, ಇದುವರೆಗೆ ನಡೆಸಿಕೊಂಡು ಬಂದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲಾಯಿತು.

ತೆಗೆದುಕೊಂಡು ಹೋಗಿದ್ದ ಮೂರೂ ಪುಸ್ತಕಗಳ 11 ಸೆಟ್‌ಗಳನ್ನು ಮುಂದಿಟ್ಟು, 'ಇವುಗಳನ್ನು ಎಲ್ಲಾ ಉಪನ್ಯಾಸಕರಿಗೆ ನೀಡಿ' ಎಂದು ಕೋರಿದಾಗ, ಪ್ರಿನ್ಸಿಪಾಲರು ತೆರೆದ ಮನಸ್ಸಿನಿಂದ ಒಪ್ಪಿದರು. ಪುಸ್ತಕಗಳ ಮುಖಪುಟ ಪರಿಶೀಲಿಸಿ, ಇಂಥ ಪುಸ್ತಕಗಳ ಅವಶ್ಯಕತೆ ಈ ದಿನಗಳಲ್ಲಿ ತುಂಬಾ ಇದೆ' ಎಂದು ತಮ್ಮ ಅಭಿಪ್ರಾಯ ತಿಳಿಸಿದರು.

'ಒಂದು ದಿನ ನಿಗದಿಪಡಿಸಿ ತಿಳಿಸಿದರೆ, ಆ ದಿನ ಬಂದು, ಪುಸ್ತಕಗಳಲ್ಲಿನ ವಿಷಯದ ಬಗ್ಗೆ ಒಂದು ಗಂಟೆ ಉಪನ್ಯಾಸ ನೀಡಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಪುಸ್ತಕಗಳನ್ನು ಪಿಯು ಮತ್ತು ಪದವಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಮಾಜವಾದಿ ವೇದಿಕೆ ನೀಡುತ್ತದೆ. ಉಪನ್ಯಾಸಕರು ಮತ್ತು ಪ್ರಿನ್ಸಿಪಾಲರಿಂದ ಮಾತ್ರ ಹಣ ಪಡೆದುಕೊಳ್ಳಲಾಗುತ್ತದೆ' ಎಂಬುದನ್ನು ತಿಳಿಸಿದಾಗ ಅವರು ಸಂತೋಷಪಟ್ಟರು. 'ಎಷ್ಟೊಂದು ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದ್ದೀರಲ್ಲ ಸರ್' ಎಂದು ತಮ್ಮ ಅಭಿಮಾನ ವ್ಯಕ್ತಪಡಿಸಿದರು.

ಒಟ್ಟು 11 ಸೆಟ್ (ಅಂದರೆ 33 ಪುಸ್ತಕಗಳು) ಒಟ್ಟು ಬೆಲೆ ರೂ. 660/- ಗಳನ್ನು ತಮ್ಮ ಕಡೆಯಿಂದಲೇ ಕೊಟ್ಟು, ಪುಸ್ತಕಗಳನ್ನು ನೀಡಿದಾಗ, ಉಪನ್ಯಾಸಕರಿಂದ ಮೊತ್ತ ಪಡೆದುಕೊಳ್ಳುವುದಾಗಿ ತಿಳಿಸಿದರು.

ಮತ್ತೊಮ್ಮೆ ಚಹಾ ತರಿಸಿ, ತಮ್ಮ ಆತಿಥ್ಯದ ಪರಿಚಯ ಮಾಡಿಕೊಟ್ಟರು.

2022-23ನೇ ಶೈಕ್ಷಣಿಕ ವರ್ಷದಲ್ಲಿ ಕಾಲೇಜಿನೊಂದಿಗೆ ನಿರಂತರವಾಗಿ ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಿದಾಗ, ಪ್ರಿನ್ಸಿಪಾಲರು ಸಂತೋಷದಿಂದ ಒಪ್ಪಿದರು. ಗ್ರಾಮೀಣ ಪ್ರದೇಶದ ಮಕ್ಕಳ ಬಗ್ಗೆ ಸಮಾಜವಾದಿ ವೇದಿಕೆಗೆ ಇರುವ ಕಾಳಜಿಯನ್ನು ಕಂಡು ಹೆಮ್ಮೆಪಟ್ಟರು ಮತ್ತು ಧನ್ಯವಾದಗಳನ್ನು ತಿಳಿಸಿದರು.

ಪ್ರಿನ್ಸಿಪಾಲ್ ರಮೇಶ್ ಅವರು ಎಷ್ಟೊಂದು ಸಹಕಾರ ಮನೋಭಾವ ಹೊಂದಿರುವರು ಎಂಬುದಕ್ಕೆ ಸಾಕ್ಷ್ಯ ಎಂಬಂತೆ 'ಸರ್, ನಮ್ಮ ಹೈಸ್ಕೂಲೂ ಇದೆ. ಅಲ್ಲೂ 30 ಜನ ಶಿಕ್ಷಕರು ಇದ್ದಾರೆ; ಅವರಿಗೂ ಈ ಪುಸ್ತಕಗಳ ಒಂದೊಂದು ಸೆಟ್ ನೀಡಿ. ಅವರೂ ವಿಚಾರ ತಿಳಿದುಕೊಂಡರೆ, ಮಕ್ಕಳಿಗೆ ಅದನ್ನು ಸಹಜವಾಗಿಯೇ ತಿಳಿಸುತ್ತಾರೆ' ಎಂಬ ಸಲಹೆಯನ್ನು ನೀಡಿದ್ದಲ್ಲದೆ, 'ಬನ್ನಿ, ನಮ್ಮ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಆಕಡೆ ಬಿಲ್ಡಿಂಗ್‌ನಲ್ಲಿ ಇದ್ದಾರೆ; ಅವರ ಜೊತೆಗೆ ಮಾತನಾಡೋಣ' ಎಂದು ಸಲಹೆ ನೀಡಿದರು.

ಅವರನ್ನು ಅನುಸರಿಸಿ, ಆಕಡೆ ಬಿಲ್ಡಿಂಗ್‌ಗೆ ಹೋದಾಗ, ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಲಕ್ಷ್ಮೀನಾರಾಯಣರಾಜು ಅರಸು ಅವರನ್ನು ಭೇಟಿ ಮಾಡಿಸಿದರು. ಕಿರಿಯ ವಯಸ್ಸಿನಲ್ಲೇ ಅವರು ಗಮನಾರ್ಹ ಶಿಕ್ಷಣ ಸಂಸ್ಥೆಯನ್ನು ರೂಪಿಸಿರುವುದು ಸ್ವಯಂ ಸ್ಪಷ್ಟವಾಗುವಂತಿತ್ತು.

ಅವರೊಂದಿಗೆ ಸೌಹಾರ್ದಯುತವಾಗಿ ಮಾತಾಡಿದ ಬಳಿಕ, ಅವರಿಗೆ ಸಮಾಜವಾದಿ ವೇದಿಕೆಯ ಪರಿಚಯ ನೀಡಿ, ಇದುವರೆಗೆ ನಡೆಸಿಕೊಂಡು ಬಂದ ಕಾರ್ಯಚಟುವಟಿಕೆಗಳ ಮಾಹಿತಿ ಕೊಟ್ಟು, ಸಹಕಾರ ಕೋರಿದಾಗ, 'ಸರ್ ನಮ್ಮ ಶಾಲೆ, ಕಾಲೇಜು ನಿಮ್ಮ ವಿಚಾರಕ್ಕೆ ಸ್ಪಂದಿಸುತ್ತದೆ. ನಮ್ಮಲ್ಲಿ ಉತ್ತಮ ಬೋಧಕ ವರ್ಗದವರು ಇದ್ದಾರೆ. ದಯಮಾಡಿ ಬರುತ್ತಿರಿ, ಪುಸ್ತಕಗಳನ್ನು ತಂದು ಕೊಡಿ. ಅದರ ಹಣ ಏನಿದೆಯೊ, ಅದನ್ನು ಸಂಸ್ಥೆ ಪಾವತಿಸುತ್ತದೆ. ಮಕ್ಕಳಿಗೆ ಒಳ್ಳೆಯ ವಿಚಾರ ಕೊಡಲು ಅಷ್ಟು ದೂರದಿಂದ ನಿಮ್ಮಂಥವರು ಬರುವುದೇ ದೊಡ್ಡದು.. ..' ಇತ್ಯಾದಿ ಮಾತುಗಳ ಮೂಲಕ ಅವರು ತಮ್ಮ ಔದಾರ್ಯವನ್ನು ತೋರಿದರು.

ಅಲ್ಲಿಂದ ಬೀಳ್ಕೊಂಡು, ರಮೇಶ್ ಅವರ ಜೊತೆಗೆ ಮತ್ತೆ ಕಾಲೇಜಿಗೆ ಬಂದ ಬಳಿಕ, ಅವರ ಬೈಕ್‌ನಲ್ಲೇ ಹತ್ತಿರದ ಬಸ್ ಸ್ಟಾಪ್‌ವರೆಗೆ ಲಿಫ್ಟ್ ಪಡೆದುಕೊಂಡೆ.

* * *

ಬಸ್‌ಸ್ಟಾಪ್‌ನಲ್ಲಿ ತುಸು ಹೊತ್ತು ಕಾದೆ. ಬಸ್ ಬರಲಿಲ್ಲ. ತುಸು ದೂರದಲ್ಲಿ ರಾಮೋಹಳ್ಳಿ ಪಂಚಾಯತ್ ಆಫೀಸ್ ಇರುವ ಬೋರ್ಡ್ ಕಾಣಿಸಿತು. ಅಲ್ಲಿಗೆ ಹೋದೆ.

ಪಂಚಾಯತ್ ಆಫೀಸಿನಲ್ಲಿ ಕಂಪ್ಯೂಟರ್ ಆಪರೇಟರ್ ಬಿಟ್ಟರೆ ಯಾರೂ ಇರಲಿಲ್ಲ. ಅವರನ್ನೇ ಮಾತನಾಡಿಸಿದೆ. ಪರಿಚಯ ಮಾಡಿಕೊಂಡೆ. 'ಏನು ಬೇಕಾಗಿತ್ತು?' ಎಂದು ಅವರು ಕೇಳಿದಾಗ 'ನನಗೆ ಏನೂ ಬೇಕಾಗಿಲ್ಲ. ಏನೂ ಅರ್ಜಿ ಕೊಡುವುದು ಇಲ್ಲ. ಪಂಚಾಯತ್ ಏನೇನು ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡಿದೆ ಎಂಬುದನ್ನು ತಿಳಿದುಕೊಳ್ಳಲು ಬಂದಿರುವುದು' ಎಂದು ತಿಳಿಸಿದಾಗ, ಆ ಯುವಕ ಕಣ್ ಕಣ್ ಬಿಟ್ಟ.

'ಕ್ರಿಯಾಯೋಜನೆ ರೂಪಿಸಿದ್ದರೆ, ಅದರ ಒಂದು ಕಾಪಿ ಕೊಡಬಹುದಾ?' ಎಂದು ಕೇಳಿದೆ. 'ಮೇಡಂ (ಪಂಚಾಯತ್

ಅಭಿವೃದ್ಧಿ ಅಧಿಕಾರಿ) ಬರಬೇಕು, ಅವರ ಬಳಿ ಇದೆ' ಎಂಬ ಉತ್ತರ ಬಂತು.

'ಪಂಚಾಯತ್ ವ್ಯಾಪ್ತಿಯಲ್ಲಿ ಎಷ್ಟು ಜನರು ವಸತಿರಹಿತರು ಇದ್ದಾರೆ? ಎಂಬ ಪಟ್ಟಿ ನಿಮ್ಮ ಕಂಪ್ಯೂಟರ್‌ನಲ್ಲಿ ಇದೆಯೆ?' ಎಂದು ಕೇಳಿದರೆ, ಅದಕ್ಕೂ 'ಮೇಡಂ ಬಳಿ ಇದೆ' ಎಂಬ ಉತ್ತರ ಬಂತು.

ಕಂಪ್ಯೂಟರ್ ಕಡೆ ಕೈ ತೋರಿಸಿ 'ಇದನ್ನು ನೀವು ಆಪರೇಟ್ ಮಾಡ್ತೀರಾ? ಮೇಡಂ ಮಾಡ್ತಾರಾ?' ಎಂದು ಕೇಳಿದೆ. ಇದರಲ್ಲಿ ಪಂಚಾಯತಿಗೆ ಸಂಬಂಧಿಸಿದ ಮಾಹಿತಿ ಏನೇನು ಇದೆ ಅದನ್ನು ಒಂದು ಪ್ರಿಂಟೌಟ್ ಕೊಡಬಹುದಾ?' ಎಂದು ಕೇಳಿದರೆ, ಆತ 'ಇಲ್ಲ ಸರ್, ನಾವು ಏನೇ ಮಾಡಿದರೂ ಮೇಡಂ ಪರ್ಮಿಷನ್ ಬೇಕು' ಎಂದು ಕೈಚೆಲ್ಲಿದ.

ನಾನು ಸಮಾಧಾನದಿಂದ 'ನಾವು ಪಬ್ಲಿಕ್‌ರೀ. ಪಂಚಾಯತ್‌ಗೆ ಬಂದು ಕೆಲವೊಂದು ಮಾಹಿತಿ ಕೇಳಿದರೆ, ನೀವು ಮೇಡಂ ಹೇಳಬೇಕು ಅಂದರೆ ಸರಿ ಏನ್ರೀ? ಮೇಡಂ ಅವರಿಗೆ ಇಪ್ಪತ್ತೆಂಟು ಕೆಲಸಗಳು ಇರ್ತಾವೆ. ಅವರು ಇರೋವಾಗ್ಲೇ ಯಾರಿಗಾದರೂ ಬರೋದಿಕ್ಕೆ ಆಗುತ್ತಾ? ನೀವು ಸರ್ಕಾರದಿಂದ ಸಂಬಳ ಪಡೀ ತಿದೀರಾ. ಸ್ವಲ್ಪ ಯೋಚ್ನೆ ಮಾಡಿ. ಮೇಡಂ ಅವರಿಗೂ ಹೇಳಿ. ಸಾರ್ವಜನಿಕರಿಗೆ ಸಹಾಯ ಮಾಡೋದು ನಿಮ್ಮ ಧರ್ಮ ಅಲ್ಲವೇ?' ಎಂದು ತಿಳುವಳಿಕೆ ಹೇಳಿ

'ಮೇಡಂ ಅವರದು ಮೊಬೈಲ್ ನಂಬರ್ ಕೊಡಿ, ನಾನೇ ಮಾತಾಡ್ತೇನೆ' ಎಂದು ಕೇಳಿದೆ. ಆತ ಕೊಡಲು ಹಿಂದೆ ಮುಂದೆ ನೋಡಿದಾಗ, 'ಅವರ ಹತ್ತಿರ ಇರೋದು ಸರ್ಕಾರದ ಮೊಬೈಲ್ ನಂಬರ್ ಆದ್ರೆ ಕೊಡಿ; ಅವರ ಪರ್ಸನಲ್ ಮೊಬೈಲ್ ಆದರೆ ಅದನ್ನ ನನಗೆ ಕೊಡೋದು ಬೇಡ' ಎಂದು ತುಸು ಗದರಿದ ಧ್ವನಿಯಲ್ಲಿ ಹೇಳಿದಾಗ

ಆತ, ತನ್ನ ಮೊಬೈಲ್ ನಂಬರ್‌ನಲ್ಲಿದ್ದ ಮೇಡಂ ನಂಬರ್ ನನಗೆ ತಿಳಿಸಿದ.

ನಾನು ಆ ನಂಬರಿಗೆ ಕಾಲ್ ಮಾಡಿದೆ. ಮೇಡಂ ಕಾಲ್ ಸ್ವೀಕರಿಸಿದರು. ಸ್ಪೀಕರ್ ಹಾಕಿದೆ. ನಾನು ಬಂದ ವಿಷಯ ತಿಳಿಸಿದೆ. ಪಂಚಾಯತ್‌ನಲ್ಲಿ ನಡೆದ ವಿಷಯವನ್ನೂ ಸಂಕ್ಷಿಪ್ತದಲ್ಲಿ ತಿಳಿಸಿದೆ. ಅವರು 'ಸರ್, ಯಾರ‍್ಯಾರೊ ಬಂದು ಏನೇನೋ ಕೇಳ್ತಾರೆ. ಅದಕ್ಕೇನೆ ಅವರು ನಿಮಗೂ ಹಾಗೇ ಹೇಳಿದ್ದಾರೆ. ಸಾರಿ ಸರ್. ನಾನು ಇಲ್ಲಿನ ಮೀಟಿಂಗ್ ಮುಗಿಸ್ಕೊಂಡು ಬರೋದಿಕ್ಕೆ 2–3 ಗಂಟೆ ಆಗುತ್ತೆ. ನೀವು ಬೇರೆ ದಿನ ಇದೇ ನಂಬರಿಗೆ ಕಾಲ್ ಮಾಡ್ಕೊಂಡು ಬನ್ನಿ ಸರ್. ನಿಮಗೆ ನಮ್ ಪಂಚಾಯತ್ ಬಗ್ಗೆ ಏನು ಮಾಹಿತಿ ಬೇಕೊ, ಅದನ್ನು ನಾನು ಕೊಡ್ತೇನೆ' ಅಂದರು.

'ನೋಡ್ರೀ, ನಿಮ್ ಪಿಡಿಒ ಹೇಗೆ ಮಾತನಾಡಿದರು? ಅವರ ಹಾಗೇನೇ ನೀವು ಕೂಡ ಎಲ್ಲರ ಜೊತೆಗೆ ಸೌಜನ್ಯದಿಂದ ಮತ್ತು ನಗುಮುಖದಿಂದ ಮಾತನಾಡಬೇಕ್ರಿ? ನಿಮಗೆ ಇನ್ನೂ ಏಜ್ ಇದೆ. ಪ್ರಮೋಷನ್ ಸಿಗುತ್ತೆ. ನೀವೂ ಪಿಡಿಒ ಆಗ್ತೀರಿ. ಆಗನೂ ಹಿಂಗೇ ಇದ್ರೆ ಹೆಂಗ್ರೀ?' ಎಂದು, ನೈಸಾಗಿ ಬುದ್ಧಿಹೇಳಿ ಹೊರಬಿದ್ದೆ.

* * *

ಮತ್ತೆ ಬಸ್‌ಸ್ಟಾಪ್‌ಗೆ ಬಂದೆ. ಒಬ್ರನ್ನ ಕೇಳಿದಾಗ, ಒಂದು ಬಸ್ ಬಂದು ಹೋಯಿತು ಎಂಬ ಮಾಹಿತಿ ತಿಳಿಯಿತು. ಇನ್ನೇನು ಮಾಡುವುದು ಎಂದು ಬಸ್ ಬರುವುದನ್ನೇ ಕಾಯುತ್ತಾ ಇದ್ದಾಗ, ಒಂದು ಕಾಂಪೌಂಡ್ ಒಳಗೆ ಕೆಲವು ವಿದ್ಯಾರ್ಥಿಗಳು ಶ್ರಮದಾನ ಮಾಡುತ್ತಿರುವುದು ದೂರದಿಂದ ಕಂಡಿತು. ಅಲ್ಲಿಗೆ ಹೋದೆ.

'ಏನ್ರಪ್ಪಾ, ನೀವೆಲ್ಲಾ ಯಾರು? ಇಲ್ಲೇನ್ ಮಾಡ್ತಿದೀರಿ?' ಎಂದು ಕೇಳಿದೆ. ಅವರು ತಾವು ಎನ್.ಎಸ್.ಎಸ್. ಸ್ವಯಂ ಸೇವಕರು ಎಂದೂ, ಕ್ಯಾಂಪ್ ಚಟುವಟಿಕೆಗಳ ಭಾಗವಾಗಿ ಈ ಪ್ರಾಥಮಿಕ ಶಾಲೆಯ ಆವರಣವನ್ನು ಸ್ವಚ್ಛಗೊಳಿಸುತ್ತಿರುವುದಾಗಿ ತಿಳಿಸಿದರು.

'ನಿಮ್ಮ ಲೀಡರ್ ಯಾರು? ಯಾರಾದ್ರೂ ಉಪನ್ಯಾಸಕರು ಅಥವಾ ಪ್ರೊಫೆಸರ್ ಬಂದಿದಾರಾ?' ಎಂದು ವಿಚಾರಿಸುವ ಹೊತ್ತಿಗೆ ಒಬ್ಬರು ಮುಂದೆ ಬಂದು 'ಸರ್ ಏನ್ ವಿಷಯ? ನಾನು ಕಾಮರ್ಸ್ ಪ್ರೊಫೆಸರ್. ನಾವು ನ್ಯಾಷನಲ್ ಕಾಲೇಜು ಬಸವನಗುಡಿ, ಬೆಂಗಳೂರಿನವರು. ಇದು ನಾಲ್ಕನೇ ದಿನ. ಕ್ಯಾಂಪ್ ಒಟ್ಟು 7 ದಿನ ನಡೆಯುತ್ತೆ' ಎಂದು ಪರಿಚಯಿಸಿಕೊಂಡರು.

ಅವರ ಬದ್ಧತೆ ಮತ್ತು ಕ್ರಿಯಾಶೀಲತೆಗೆ ಮೆಚ್ಚುಗೆ ಸೂಚಿಸಿ, ಅವರನ್ನು ಮುಂದೆ ಯಾವಾಗಲಾದರೂ ಭೇಟಿಯಾಗುವುದಾಗಿ ತಿಳಿಸಿ, ಮತ್ತೆ ಬಸ್‌ಸ್ಟಾಪ್ ಕಡೆ ಬಂದೆ.

ಸ್ವಲ್ಪ ಹೊತ್ತಿನಲ್ಲೇ ಬಸ್ ಬಂತು. ಮನೆಗೆ ಹಿಂತಿರುಗಿದೆ. ದಿನವನ್ನು ಅರ್ಥಪೂರ್ಣವಾಗಿ ಕಳೆದುದಕ್ಕೆ ತೃಪ್ತಿಯಾಯಿತು. ಇದನ್ನು ಇತರ ಮಿತ್ರರಿಗೂ ತಿಳಿಸಿ, ಅವರೂ ಹೀಗೇ ತಿಂಗಳಲ್ಲಿ ಒಂದು ದಿನವಾದರೂ ಈ ರೀತಿ ಸಮಯ ವಿನಿಯೋಗ ಮಾಡಬಹುದು ಅಲ್ಲವೆ? ಎನಿಸಿತು. ತಿಳಿಸುತ್ತಿದ್ದೇನೆ.

**ಮಂಗ್ಳೂರ ವಿಜಯ**

---

ನಾವು ತೆರೆದ ಮನಸ್ಸಿನಿಂದ ಕೆಲಸ ಮಾಡೋಣ. ಯಶಸ್ಸಿನ ಬಗ್ಗೆ ತುಸು ಕಡಿಮೆ ಯೋಚಿಸೋಣ. ಪ್ರಾಮಾಣಿಕ ಕೆಲಸ ನಮ್ಮದು; ಫಲಿತಾಂಶ ಏನೇ ಬರಲಿ

ನಮ್ಮ ಕೆಲಸವನ್ನು ಮತ್ತೆ ಪ್ರಾಮಾಣಿಕತೆಯಿಂದ ಮಾಡುತ್ತಾ ಹೋಗೋಣ. ತಪ್ಪುಗಳು ಜರುಗಿದ್ದಲ್ಲಿ, ಅವುಗಳನ್ನು ಸರಿಪಡಿಸಿಕೊಳ್ಳೋಣ. ಮತ್ತೆ ಕೆಲಸ ಮುಂದುವರೆಸೋಣ.